villages. But, instead of doing that, they are giving only one or half the schedule of trips. I urge the Government that there must be some check on this.

SRI M. P. PRAKASH.—Mr. Speaker Sir, certainly I agree with the suggestion of the hon. Member. This matter pertains to the Zilla Parishads. It is better if he takes up the matter with the President and Chief Secretary of the Zilla Parishad. The Ministry of Rural Development and Panchayati Raj will also see that there will be an effective check in this behalf.

ಶ್ರೀ ಪಂದನಗೋಪಾಲ ನಾಯಕ್ —ಸ್ವಾಮಿ, ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ನಿಮ್ಮನ್ನು ಕೇಳಿ ಎಂದು ಹೇಳುತ್ತಾರೆ, ನಿಮ್ಮನ್ನು ಕೇಳಿದರೆ ಜಿಲ್ಲಾ ಪರಿಷತ್ತಿನವರನ್ನು ಕೇಳಿ ಎಂದು ಹೇಳುತ್ತೀರಿ.

ಶ್ರೀ ಎಂ. ಪಿ ಪ್ರಕಾಶ್.—ಸರಿಯಾಗಿ ನೀರನ್ನು ಒದಗಿಸಿ ಎಂದು ಕೇಳುತ್ತಿದ್ದಾರೆ.....

ಶ್ರೀ ಮಲ್ಲಾರಿ ಗೌಡ ಎಸ್ ಪಾಟೀಲ್.—ಇದಕ್ಕೆ ಸಂಬಂಧಪಟ್ಟಂಥ ಜಿಲ್ಲಾ ಪರಿಷತ್ತಿನವರು ಈ ಕೆಲಸವನ್ನು ಮಾಡಬೇಕು. ಅವರು ಮಾಡದಿದ್ದರೆ ನೀವಾದರೂ ಮಾಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಂ. ಪಿ. ಪ್ರಕಾಶ್.—ಈಗ ಅಧಿಕಾರ ವಿಕೇಂದ್ರೀಕರಣಮಾಡಿ, ಆ ಅಧಿಕಾರವನ್ನು ಜಿಲ್ಲಾ ಪರಿಷತ್ತಿನವರಿಗೆ ಕೊಟ್ಟಿರತಕ್ಕ ಸಂದರ್ಭದಲ್ಲಿ ಆಗಿರತಕ್ಕ ಲೋಪದೋಷಗಳನ್ನು ಸರಿಪಡಿಸಿ ಎಂದು ನಿರ್ದೇಶನವನ್ನು ನಾವು ಖಂಡಿತವಾಗಿ ಕೊಡಬೇಕಾಗುತ್ತದೆ. ಖಂಡಿತ ಕೊಡುತ್ತೇವೆ ಇದನ್ನು ಮಾನ್ಯ ಸದಸ್ಯರು ಅಲ್ಲಿಯೂ ಕೂಡ ಪ್ರಸ್ತಾಪ ಮಾಡಬೇಕು. ಏಕೆಂದರೆ ಬೆಳಗಾಂ ಜಿಲ್ಲಾ ಪರಿಷತ್ತಿನ ಸದಸ್ಯರಾಗಿದ್ದಾರೆ. ಆದ್ದರಿಂದ ಇದನ್ನು ಅಲ್ಲಿಯೂ ಇವರು ಪ್ರಾತನಾಡಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬೆಳಗಾಂ ಜಿಲ್ಲಾ ಘಟಕಕ್ಕೆ ಸಂಬಂಧಪಟ್ಟಂತೆ ಪಟ್ಟಿಯನ್ನು ಓದುವಾಗ ೨ ತಾಲ್ಲೂಕುಗಳನ್ನು ಬಿಟ್ಟಿದ್ದಾರೆ. ಆದರೆ ಜಿಲ್ಲೆಯಲ್ಲಿರತಕ್ಕ ಎಲ್ಲಾ ತಾಲ್ಲೂಕುಗಳಿಗೂ ಒಂದೇ ಸಮನಾದ ಆದ್ಯತೆಯನ್ನು ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಆದರೆ ಈ ಪಟ್ಟಿಯಲ್ಲಿ ೨ ತಾಲ್ಲೂಕುಗಳನ್ನು ಬಿಟ್ಟು ಉಳಿದ ೮ ತಾಲ್ಲೂಕುಗಳಿಗೆ ಹಣವನ್ನು ಹಂಚಿರತಕ್ಕದ್ದರ ಔಚಿತ್ಯವೇನು ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ. ಪಿ ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಪ್ರಾಯಶಃ ಯಾವ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬವಣೆ ಇರತಕ್ಕ ಪ್ರದೇಶ ಇದೆ ಅಲ್ಲಿಗೆ ನೀರನ್ನು ಲಾರಿಗಳ ಮೂಲಕವಾಗಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಅಥಣಿ, ರಾಯಭಾಗ್‌ನಲ್ಲಿ ನೀರಿನ ಕೊರತೆ ಅಷ್ಟು ಇಲ್ಲದೇ ಇರುವುದರಿಂದ ಸಾಗಾಣಿಕೆ ಮಾಡಿರುವುದಿಲ್ಲವೆಂದು ಕಾಣುತ್ತದೆ.

ಕೊಡಗು ಜಿಲ್ಲಾ ಪರಿಷತ್‌ನವರು ಕೈಕೊಂಡ ಯೋಜನೆಗಳು

೧೯೯೭. ಶ್ರೀಮತಿ ಸುಮ ವಸಂತ (ವೀರಾಜಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧-೪-೮೭ ರಿಂದ ೩೦-೪-೮೮ರ ವರೆಗೆ ಕೊಡಗು ಜಿಲ್ಲಾ ಪರಿಷತ್ ಕಾರ್ಯಾಲಯದಿಂದ ಕೊಡಗು ಜಿಲ್ಲೆಯಲ್ಲಿ ಎನ್. ಆರ್. ಇ. ಪಿ (ಮೂಲ) ಎನ್. ಆರ್. ಇ. ಪಿ (ಬಾಗಲ) ಆರ್. ಎಲ್. ಇ. ಜಿ. ಪಿ. ಹಾಗೂ ಡಿ.ಪಿ.ಎ.ಪಿ ಯೋಜನೆಗಳ ಅಡಿಯಲ್ಲಿ ಇಲ್ಲಿಯವರೆಗೆ ತೆಗೆದುಕೊಂಡಿರುವ ಕಾಮಗಾರಿಗಳೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ಯೋಜನೆಗಳ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣವೆಷ್ಟು ? ಹಾಗೂ ಇವುಗಳಲ್ಲಿ ಪೂರ್ತಿಗೊಂಡ ಕಾಮಗಾರಿಗಳೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮತ್ತು ಪಶು ಸಂಗೋಪನಾ ಮಂತ್ರಿಗಳು).—

ತೆಗೆದುಕೊಂಡಿರುವ ಕಾಮಗಾರಿಗಳ ವಿವರ

			ಮಡಿಕೇರಿ	ಸೋಮವಾರಪೇಟೆ	ವೀರಾಜಪೇಟೆ
ಅ)	೧.	ಎನ್. ಆರ್. ಇ. ಪಿ. (ಮೂಲ)	೧೨೪	೯೨	೧೦೩
	೨.	ಎನ್.ಆರ್.ಇ.ಪಿ. (ಬರಗಾಲ)	—	೭೭	೩೮
	೩.	ಆರ್.ಎಲ್.ಇ.ಜಿ.ಪಿ.	೧೨೪	೧೪೧	೧೦೦
	೪.	ಡಿ.ಪಿ.ಎ.ಪಿ. ಯೋಜನೆಯಿರುವುದಿಲ್ಲ.			

ಖರ್ಚು ಮಾಡಿದ ಹಣದ ವಿವರ (ಲಕ್ಷ ರೂ. ಗಳಲ್ಲಿ)

ಅ)	೧.	ಎನ್.ಆರ್.ಇ.ಪಿ. (ಮೂಲ)	೩.೮೦೬	೧೭.೩೩೫	೨.೧೨೪
	೨.	ಎನ್.ಆರ್.ಇ.ಪಿ. (ಬರಗಾಲ)	೦.೦೪೩	೧೦.೧೮೫	೧೬.೦೨೯
	೩.	ಆರ್.ಎಲ್.ಇ.ಜಿ.ಪಿ.	೧೨.೩೮೯	೧೪.೭೭೪	೯.೧೭೧

ಪೂರ್ತಿಗೊಂಡ ಕಾಮಗಾರಿಗಳ ವಿವರ

	೧.	ಎನ್.ಆರ್.ಇ.ಪಿ. (ಮೂಲ)	೨೫	೬೯	೭೭
	೨.	ಎನ್.ಆರ್.ಇ.ಪಿ. (ಬರಗಾಲ)	—	೫೦	೩೯
	೩.	ಆರ್.ಎಲ್.ಇ.ಜಿ.ಪಿ.	೯೫	೫೯	೧೩೬

ಶ್ರೀ ಡಿ. ಎ. ಚಿನ್ನಪ್ಪ (ಶ್ರೀಮತಿ ಸಂಪಾ ವಸಂತ್ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಎನ್.ಆರ್.ಇ.ಪಿ, ಹಾಗೂ ಆರ್.ಎಲ್.ಇ. ಜಿ.ಪಿ. ಅಡಿಯಲ್ಲಿ ಒಟ್ಟು ಹಣ ಎಷ್ಟು ಬಂದಿದೆ ? ಆರ್.ಎಲ್.ಇ.ಜಿ.ಪಿ. ಅಡಿಯಲ್ಲಿ ಸೋಮವಾರಪೇಟೆಯಲ್ಲಿ ೧೩೦ ಕೆಲಸಗಳು ಇದ್ದು ಆದರಲ್ಲಿ ಕಂಪ್ಲೀಟ್ ಆಗಿರತಕ್ಕದ್ದು ೧೩೮ ಎಂದು ಇದೆ. ಈ ೮ ಹೇಗೆ ಜಾಸ್ತಿಯಾಯಿತು ? ಹಾಗೂ ಎನ್.ಆರ್.ಇ.ಪಿ ಯಲ್ಲಿ ಮಡಿಕೇರಿಯಲ್ಲಿ ೧೨೪ ಕೆಲಸಗಳನ್ನು ಅಪ್ರೂವ್ ಆಗಿದ್ದು ಆಗಿರತಕ್ಕ ಕೆಲಸಗಳು ೨೫ ಮಾತ್ರ. ಇದಕ್ಕೆ ಕಾರಣ ಏನು ?

ಶ್ರೀ ಎಂ. ಪಿ. ಪ್ರಕಾಶ್ (ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮಂತ್ರಿಯವರ ಪರವಾಗಿ).—ಅಧ್ಯಕ್ಷರೇ, ಎಷ್ಟು ಹಣವನ್ನು ಈ ಬಾಬುಗಳಿಗಾಗಿ ಬಿಡುಗಡೆ ಮಾಡಲಾಗಿದೆ ಎಂಬುದಂ ಇವರ ಪೂರಕ ಪ್ರಶ್ನೆ ಯಾಗಿದ್ದು ಅದಕ್ಕೆ ಉತ್ತರವನ್ನು ಕೊಡಲಾಗಿದೆ. ತಾಲ್ಲೂಕುವಾರು ವಿವರವನ್ನು ಕೇಳಿದ್ದು ಅದಕ್ಕೆ ವಿವರವನ್ನು ಒದಗಿಸಲಾಗಿದೆ. ಅವರಿಗೆ ಹೆಚ್ಚಿನ ಮಾಹಿತಿ ಬೇಕಾದರೆ ನಂತರ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ೮ ಕಾಮಗಾರಿಗಳು ಹೆಚ್ಚಾಗಿರುವುದಕ್ಕೆ ಕಾರಣ ಕೇಳಿದ್ದಾರೆ. ಪ್ರಾಯಶಃ ಅಲ್ಲಿ ಅಡಿಷನಲ್ಲಾಗಿ ಹೆಚ್ಚಿನ ಕೆಲಸವನ್ನು ತೆಗೆದುಕೊಂಡಿರಬಹುದು. ಮತ್ತೆ ಕಾಮಗಾರಿ ಕೆಲಸ ಕಡಿಮೆಆಗಿದೆ ಎನ್ನುವುದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರಿಗೆ, ಹಾಗೂ ಅಲ್ಲಿಯ ಅಧ್ಯಕ್ಷರಿಗೆ ಬರದು ವಿವರಗಳನ್ನು ತರಿಸಿಕೊಡುತ್ತೇನೆ.